ವಾಸುದೇವರು, 'ಬಾಯ್ಮುಚ್ಚಿಕೊಂಡು ಒಮ್ಮೆ ಗುಡಿಸಲಿಗೆ ನಡೆ ಮಾರಾಯ... ಅಲ್ಲಿ ಮತ್ತೆ ರಗಳೆ ಸುರುಮಾಡಬೇಡ... ಹೋಗು...' ಎಂದಾತನನ್ನು ಸಾಗಹಾಕಲು ಯತ್ನಿಸಿದರು. ಆದರೆ ಸೋಮ, ಅವರೂ ಗುಡಿಸಲಿಗೆ ಬರಬೇಕೆಂದು ದುಂಬಾಲು ಬಿದ್ದು ಕೈ ಹಿಡಿದು ಎಳೆಯತೊಡಗಿದ. ಅವನಿಂದ ಪಾರಾಗಲು, ಗುಡಿಸಲಿನ ತನಕ ಜತೆಯಾಗುವುದನ್ನುಳಿದು ಬೇರೆ ದಾರಿ ವಾಸುದೇವರಿಗೆ ಕಾಣದಾಯಿತು. ಅವರನ್ನು ದಬ್ಬಿಕೊಂಡೇ ಎನ್ನುವಂತೆ ಗುಡಿಸಲಿನತ್ತ ಹೆಜ್ಜೆ ಎಳೆದ ಸೋಮ.

ಪಕ್ಕದಲ್ಲಿ ಚಿಮಣಿ ಹೊತ್ತಿಸಿಕೊಂಡು ಗುಡಿಸಲ ಹೊಸ್ತಿಲಲ್ಲಿ ಸೋಮನಿಗೆ ಕಾದು ಕುಳಿತಿದ್ದ ದೇವಿಗೆ, ಈ ರಾತ್ರಿಯಲ್ಲಿ ಗಂಡನೊಂದಿಗೆ ಒಡೆಯರನ್ನು ಕಂಡು ಬೆಚ್ಚಿ ಬೀಳುವಂತಾಯಿತು! ಮಿಂದು ಬಂದು, ಮುಡಿಯನ್ನು ಕಟ್ಟಿಕೊಳ್ಳದೆ, ತುಂಡು ಸೀರೆಯನ್ನಷ್ಟೇ ಸುತ್ತಿಕೊಂಡು ಅಲ್ಲಿ ಕುಳಿತಿದ್ದ ಆಕೆ ದಿಗಿಲಲ್ಲಿ ತಟ್ಟನೆ ಎದ್ದು ನಿಲ್ಲುತ್ತಲೇ ತನುವಿನ ಕೋಮಲತೆಯೆಲ್ಲ ಚಿಮಣಿಯ ತೆಳು ಬೆಳಕಿಗೆ ತೆರೆದುಕೊಂಡು ಬಿಟ್ಟಿತು! ಮುಜುಗರಗೊಂಡ ಆಕೆ ತನ್ನ ಉದ್ದನೆಯ ಹೆರಳನ್ನು ಮುಂದೆಳೆದು ಎದೆಯಲ್ಲಿ ಹರಡಿಕೊಂಡಳಾದರೂ, ಈ ಸ್ಥಿತಿಯಲ್ಲಿ ಕಣ್ಣಿಗೆ ಬಿದ್ದ ಅವಳ ಅಪೂರ್ವ ದೇಹಸೌಂದರ್ಯ ವಾಸುದೇವರನ್ನು ಮೂಕ ವಿಸ್ಮಿತರನ್ನಾಗಿ ಮಾಡಿತು. ಮೈಮರೆತು ತನ್ನನ್ನು ಇಡಿಯಾಗಿ ಕಣ್ತುಂಬಿಕೊಳ್ಳುವಂತೆ ನೋಡುತ್ತಿದ್ದ ಒಡೆಯನನ್ನು ಗಮನಿಸಿದ ದೇವಿ, ಸಂಕೋಚದ ಮುದ್ದೆಯಾದಳು. ಸರಕ್ಕನೆ ಎರಡು ಹೆಜ್ಜೆ ಮುಂದಿಟ್ಟು, ತೂರಾಡುತ್ತಿದ್ದ ಸೋಮನನ್ನು ಆಧರಿಸಿ ಆತನನ್ನು ಗುಡಿಸಲೊಳಗೆ ಕರೆದೊಯ್ದು, ಚಾಪೆಯಲ್ಲಿ ಅಡ್ಡಾಗಲು ಅನುವು ಮಾಡಿಕೊಟ್ಟಳು. ವಾಸುದೇವರು ಇನ್ನೂ ಹೊರಗೆ ನಿಂತಿರುವುದರಿಂದ ಮತ್ತೊಂದು ತುಂಡು ಬಟ್ಟೆಯಲ್ಲಿ ಮೈಮುಚ್ಚಿಕೊಂಡು ಹೊರಗೆ ಬಂದವಳು, "ಅಯ್ಯಾ, ನಿಮಗಿವರು ಎಲ್ಲಿ ಸಿಕ್ಕಿದ್ರು? ಬಾಳಾ ಕಿರಿಕಿರಿ ಮಾಡಿದ್ರೋ ಏನೋ" ಎಂದಳು ಅಳುದನಿಯಲ್ಲಿ. ವಾಸುದೇವರು ಪ್ರಶ್ನೆಗುತ್ತರಿಸುವ ಬದಲು, ತೇವವಾಗಿದ್ದ ಆಕೆಯ ಹೊಳೆವ ಕಂಗಳನ್ನೇ ತದೇಕವಾಗಿ ದಿಟ್ಟಿಸುತ್ತಾ ನಿಂತುಬಿಟ್ಟಿದ್ದರು! ಅವರ ಈ ಅನಿಮಿಷ ನೋಟವನ್ನು ಎದುರಿಸಲಾಗದ ದೇವಿ, ತಲೆ ತಗ್ಗಿಸಿದಾಗ ವಾಸುದೇವರಿಗೆ ತನ್ನ ಮೈಮರೆವಿಗಾಗಿ ನಾಚಿಕೆಯಾದಂತಾಗಿ ಮತ್ತಲ್ಲಿ ನಿಲ್ಲಲಾಗದೆ, "ಬರ್ತೇನೆ ದೇವಿ" ಎಂದವರೇ ಅಲ್ಲಿಂದ ಹೊರಟುಬಿಟ್ಟರು.

"ಅಯ್ಯಾ, ದಾರಿಯಲ್ಲಿ ಅಲ್ಲಲ್ಲಿ ಕತ್ತಲಿದೆ, ಹಾಡಿ ದಾಟುವಲ್ಲಿಗಾದ್ರೂ ಚಿಮಣಿ ಹಿಡಿತೇನೆ" ಎಂದು ದೇವಿಯು ಹೊಸ್ತಿಲಲ್ಲಿಟ್ಟ ಚಿಮಣಿ ಎತ್ತಿಕೊಂಡು ಅವರನ್ನು ಹಿಂಬಾಲಿಸಿ ಹೊರಟಳು. ತುಸು ದೂರಕ್ಕೆ ನಡೆದು, ತಡೆದು ನಿಂತ ವಾಸುದೇವರು, "ದೇವೀ... ನಿನಗೆ ಬೇಕಾದುದೇನಾದರೂ ತಂದುಕೊಡಲಿ ಎಂದು ಸೋಮನಿಗೆ ಸ್ವಲ್ಪ ಜಾಸ್ತಿ ಹಣ ಕೊಡ್ತಿದ್ದೆ. ಅವ ಹೀಗೆಲ್ಲಾ ಮಾಡ್ತಾನಂತ ಎಣಿಸಿರಲಿಲ್ಲ ನಾನು. ಅಮ್ಮ ನನಗೆಲ್ಲಾ ಹೇಳಿದರು. ಅವ ಕುಡಿದು ಬರುವಾಗಲೇ ಹಿಡಿದು ಎಚ್ಚರಿಕೆ ನೀಡಲೆಂದು ನಾನಿಂದು ರಾತ್ರಿ ದಾರಿಯಲ್ಲಿ ಕಾದು ನಿಂತಿದ್ದೆ. ಆದರೆ ಸೊಯವೇ ಇಲ್ಲದ ಆತ ನನ್ನನ್ನು ಒತ್ತಾಯದಿಂದ ಗುಡಿಸಲಿಗೆ ಎಳೆದುಕೊಂಡು ಬಂದ... ಇರಲಿ, ನಾಳೆ ನಾನವನಿಗೆ ಬುದ್ಧಿ ಹೇಳ್ತೇನೆ. ನೀನು ಬೇಜಾರು ಮಾಡ್ಬೇಡಾ. ನೀನು ಗುಡಿಸಲಿಗೆ ಹೋಗು... ದಾರಿಯಲ್ಲಿ ತಿಂಗಳ ಬೆಳಕಿದೆ. ನಾನು ಹೋಗ್ತೇನೆ..." ಎಂದರು. ಅವರ ಈ ಮಾತುಗಳು ಮುಗಿಯುವ ಮುನ್ನವೇ ದೇವಿಯ ಸಣ್ಣ ಬಿಕ್ಕಳಿಕೆಯೊಂದು ಅವರ ಕಿವಿಗೆ ಬಿತ್ತು. ಕಂಗಳಿಂದ ನೀರು ತುಳುಕಿ ಆಕೆಯ ತುಂಬು ಕದಪುಗಳ ಮೇಲಿಳಿಯಲು ಪ್ರಾರಂಭವಾಯಿತು. ಯಾಕೋ ದೇವಿಯ ಕಣ್ಣೀರನ್ನು ಕಂಡ ವಾಸುದೇವರ ಹೃದಯ ತಟ್ಟನೆ ಆರ್ದ್ರವಾಗಿ